ಶಿಫಾರಸ್ಸುಗಳನ್ನು ಆಧಾರವಾಗಿಟ್ಟುಕೊಂಡು, ಎಲ್ಲೆಲ್ಲಿ ವಿಶೇಷ ತಹಶೀಲ್ದಾರರುಗಳನ್ನು ನೇಮಿಸುವ ಅವಶ್ಯಕತೆ ಇದೆ ಎನ್ನುವುದನ್ನು ಪರಿಶೀಲಿಸಿ ಆದ್ಯತೆಯ ಮೇರೆಗೆ ಕೆಲವು ಸ್ಥಳಗಳಲ್ಲಿ ವಿಶೇಷ ತಹಶೀಲ್ದಾರರುಗಳನ್ನು ನೇಮಿಸಲು ಸರ್ಕಾರ ನಿರ್ಧರಿಸಿತ್ತು.

ಆ) ಇಲ್ಲಿಯವರೆಗೆ ಈ ಕೆಳಕಂಡ 16 ಸ್ಥಳಗಳಲ್ಲಿ ವಿಶೇಷ ತಹಶೀಲ್ದಾರರುಗಳನ್ನು ನೇಮಿಸಿದೆ:

1) ಹನೂರು
2) ಮೂಡಬಿದ್ರೆ
3) ಬೈಂದೂರು
4) ತಾಳಿಕೋಟೆ
5) ಚಿಟಗುಪ್ಪ
6) ನಿಡಗುಂದಿ
7) ಬಬಲೇಶ್ವರ
8) ಲಕ್ಷ್ಮೇಶ್ವರ
9) ಇಳಕಲ್
10) ಗುಳೇದಗುಡ್ಡ
11) ಕಿತ್ತೂರು
12) ಗಜೇಂದ್ರಗಡ
13) ಕುರುಗೋಡು
14) ಮಸ್ಕಿ
15) ಕಡಬ
16) ಚಡಚಣ

ಇ) ಇಲ್ಲ.

ಉಡುಪಿ ಜಿಲ್ಲೆಯಲ್ಲಿ ನೆರೆ ಹಾಗೂ ಅತಿವೃಷ್ಟಿಯಿಂದ ಹಾನಿ

3310 (3304) : ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ರಸಕ್ತ ಸಾಲಿನಲ್ಲಿ ಉಡುಪಿ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದಾಗಿ ಸಾಕಷ್ಟು ಹಾನಿ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು)

ಅ) ಬಂದಿದೆ.

ಆ) ಪರಿಹಾರ ನೀಡುವ ಸಲುವಾಗಿ ರು. 20.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ.

ಉಡುಪಿ ಜಿಲ್ಲೆಯಲ್ಲಿ ನೆರೆಹಾವಳಿ ಹಾಗೂ ಅತಿವೃಷ್ಟಿ ಪರಿಹಾರ

3311 (3305) : ಶ್ರೀ ಜಯಪ್ರಕಾಶ್ ಹೆಗ್ಡೆ ಕೆ: ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?